ಪ್ರಮಾಣೀಕರಿಸಲಾದ ದಿನಾಂಕಃ- **21.01.2026.**

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್. ಎಸ್. ಜಿ ವಕೀಲರಿಂದಃ-

ನನ್ನ ದೂರು, ನೋಟೀಸ್, ಸಾಕ್ಷ್ಯಪ್ರಮಾಣ ಪತ್ರದಲ್ಲಿ ನನ್ನ ವೃತ್ತಿ ಬಗ್ಗೆ ಮತ್ತು ಹಣಕಾಸಿನ ವ್ಯವಹಾರ ಎಲ್ಲಿ ಆಯಿತು ಎಂದು ಹೇಳಿಲ್ಲ ಎಂದರೆ ಸರಿ. ಕೋರೋನಾ ಇದ್ದ ಕಾರಣಕ್ಕೆ 2022 ಏಪ್ರಿಲ್‌ವರೆಗೂ ನನಗೆ ಆರ್ಥಿಕವಾಗಿ ಕಷ್ಟವಾಗಿತ್ತು ಎಂದರೆ ಸರಿಯಲ್ಲ. ರೂ. 50 ಸಾವಿರ ಇದ್ದ ಬಗ್ಗೆ ದಾಖಲೆ ಕೊಟ್ಟಿಲ್ಲ. ಇವರನ್ನು ಬಿಟ್ಟರೆ ಯಾರ ಮೇಲೆ ಚೆಕ್ ಪ್ರಕರಣ ದಾಖಲು ಮಾಡಿಲ್ಲ. ಆರೋಪಿಯ ಗಂಡನ ಮೇಲೆ ಒಂದು ಚೆಕ್ ಪ್ರಕರಣವನ್ನು ಇದೇ ನ್ಯಾಯಾಲಯದಲ್ಲಿ ಹಾಕಿದ್ದೇನೆ ಎಂದರೆ ಸರಿ. ಬ್ಯಾಂಕ್ ವ್ಯವಾಹರಗಳ ಬಗ್ಗೆ ತಿಳಿದುಕೊಂಡಿದ್ದೇನೆ. ನಾನು ಬಡ್ಡಿಗೆ ಹಣ ಕೊಡುವುದಿಲ್ಲ. ನನಗೆ ಹೂವಿನ ವ್ಯಾಪಾರವಿದ್ದು, ಆಸ್ತಿ 3 ಎಕರೆ ಇದೆ ಅದರಿಂದ ಆಧಾಯವಿದೆ. ಆದಾಯ ತೋರಿಸಲು ದಾಖಲೆ ಕೊಟ್ಟಿಲ್ಲ. ನನಗೆ ಜಮೀನು ಇಲ್ಲ, ಹೂವಿನ ವ್ಯಾಪಾರವು ಇಲ್ಲ ಎಂದರೆ ಸರಿಯಲ್ಲ. ದಿ. 10.04.2022 ರಲ್ಲಿ ರೂ. 50 ಸಾವಿರ ಹಣ ಕೊಡುವಷ್ಟ ಶಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

ನಿ ಪಿ 1 ಚೆಕ್ ಅನ್ನು ಆರೋಪಿಯು ಬೆಂಗಳೂರಿನ ಚೆನ್ನಮ್ಮ ಅಚ್ಚುಕಟ್ಟು ಪೊ. ಠಾಣೆಗೆ ಯಲ್ಲಿ ಕೊಟ್ಟರು. ಆರೋಪಿ ಗಂಡ ಗೊತ್ತು 2015 ರಲ್ಲಿ ಆರೋಪಿ ಗಂಡನಿಗೆ ನಾನು ಬೇರೊಬ್ಬರಿಂದ ಸಾಲ ಪಡೆದು ಅವರಿಗೆ ಕೊಟ್ಟಿರುತ್ತೇನೆ ಎಂದರೆ ಸರಿ.

2015 ರಲ್ಲಿ ಆ ಸಾಲ ತೀರಿಸಿರುತ್ತಾರೆ. ಆ ಸಾಲದ ಭದ್ರತೆಗಾಗಿ ಈ ಚೆಕ್ ಸಂಖ್ಯೆ062220 Gonikoppa Branch ಅನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಆರೋಪಿಯ ಗಂಡ ಸಾಲ ತೀರಿಸಿದ್ದರೂ ನಾನು ಚೆಕ್ ವಾಪಸ್ ಮಾಡಿಲ್ಲ ಎಂದರೆ, ನಾನು ಚೆಕ್ ಪಡೆದಿಲ್ಲ. ಈ ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ಆರೋಪಿಯ ಗಂಡನ ಮೇಲೆ ಸಿ ಸಿ ನಂ. 1518/2022 ಹಾಕಿರುತ್ತೇನೆ ಎಂದರೆ ಅದು ಬೇರೆ ಚೆಕ್ ಆಗಿರುತ್ತದೆ. ಆ ಚೆಕ್ ಪ್ರಕರಣದ ಸಂಖ್ಯೆ ನೆನಪಿಲ್ಲ. ಬೆಂಗಳೂರಿಗೆ ಖಾಯಂ ಆಗಿ ಆರೋಪಿ ಮತ್ತು ಅವರ ಗಂಡ ಹೋದರು ಎಂದರೆ ಸರಿ. ಚೆಕ್ ಸಂಖ್ಯೆ 062220 ಯನ್ನು ದುರುಪಯೋಗಪಡಿಸಿಕೆಂಡು ಅವರ ಮನೆ ಹತ್ತಿರಹೋಗಿ ಹಣ ಕೊಡಬೇಕೆಂದು ಬಾಯಿಗೆ ಬಂದಂತೆ ಬಯ್ದಿದ್ದುತ್ತೇನೆ ಎಂದರೆ ಸರಿಯಲ್ಲ. ಆಗ ಆರೋಪಿ ಚೆನ್ನಮ್ಮ ಅಚ್ಚುಕಟ್ಟು ಪೊ. ಠಾಣೆಗೆ ದೂರು ನೀಡಿದರು ಎಂದರೆ ಸರಿ. ಪೊಲೀಸರು ನನ್ನನ್ನು

ಕರೆಸಿದರು ಎಂದರೆ ಸರಿ. ನನಗೆ ಬುದ್ದಿವಾದ ಹೇಳಿ ನನ್ನ ಹೇಳಿಕೆ ಪಡೆದರು ಎಂದರೆ ಸರಿಯಲ್ಲ. ಆಗ ಪೊಲೀಸರು ರೂ. 50 ಸಾವಿರ ಹಣಕ್ಕೆ ತೀರ್ಮಾನ ಮಾಡಿದರು ಎಂದರೆ ಸರಿಯಲ್ಲ. ಆಗ ಆರೋಪಿಯು ನಿ ಪಿ 1 ಚೆಕ್ ಅನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ, ನಾನು 2022 ರಲ್ಲಿ ಆರೋಪಿಗೆ ಕೊಟ್ಟ ರೂ. 50 ಸಾವಿರ ಹಣದ ಸಾಲಕ್ಕೆ ಆ ಚೆಕ್ ಪಡೆದಿರುತ್ತೇನೆ.

ದಿ. 01.05.2023 ರ ವರೆಗೂ ನಿ ಪಿ 1 ಚೆಕ್ ಅನ್ನು ನಗದೀರಿಕರಿಸಬಾರದು ಎಂದು ಒಪ್ಪಿ ಕೊಂಡಿದ್ದು, ರೂ. 50 ಸಾವಿರ ಹಣ ಕೊಟ್ಟ ನಂತರ ಚೆಕ್ ಸಂಖ್ಯೆ062220 ಚೆಕ್ ಅನ್ನು ವಾಪಸ್ ಕೊಡುವುದಾಗಿ ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ನಿ ಪಿ 1 ಚೆಕ್ ಹಿಂದೆ ಆರೋಪಿಯ ಗಂಡ ಕೊಟ್ಟಂತಹ ಚೆಕ್ ಅನ್ನು ಹಿಂಪಡೆಯಲು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಒಪ್ಪಿ ಕೊಂಡಂತೆ ರೂ. 50 ಸಾವಿರ ಹಣ ಕೊಡುವ ಮುಂಚೆಯೇ ನಾನು ನಿ ಪಿ 1 ಚೆಕ್ ಅನ್ನು ನಗದೀಕರಣಕ್ಕೆ ಹಾಕಿ ಇವರಿಗೆ ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಗಂಡ ನನಗೆ ಸಾಲ ಕೊಡುವುದು ಬಾಕಿ ಇದೆ ಎಂದು ಹೇಳಿರುವುದು ಸರಿ.

ದೂರಿನಲ್ಲಿ ಆರೋಪಿ ಯಾವ ದಿನಾಂಕ, ತಿಂಗಳು, ವರ್ಷ ಕೊಟ್ಟರು ಎಂದು ಹೇಳಿರುವುದಿಲ್ಲ ಎಂದರೆ ಸರಿ. ನನಗೂ ಆರೋಪಿಗೂ ಯಾವುದೇ ಸಾಲದ ವ್ಯವಹಾರ ಇಲ್ಲದಿರುವುದರಿಂದ ಈ ವಿಷಯಗಳು ತಿಳಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ಅವರ ಗಂಡನ ಮೇಲೆ ಹಾಕಿರುವುದು ಸುಳ್ಳು ಕೇಸ್ ಎಂದರೆ ಸರಿಯಲ್ಲ. ನಾನು ಆರೋಪಿಗೆ ಬೆಂಗಳೂರಿನಲ್ಲಿ ಹಣ ಕೇಳಿರುವ ವಿಚಾರದಲ್ಲಿ ಗಲಾಟೆ ಆಗಿ ಬಯ್ದಿರಬಹುದು. ಆರೋಪಿ ಮತ್ತು ಅವರ ಗಂಡನಿಗೆ ಬೆಂಗಳೂರಿನಿಂದ ಅಲಿಸಿ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದೂರು ಹಾಕಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ